

‘ಬೂಸಾ’ ಹೇಳಿಕೆಯ ಮೂಲಕ ಕನ್ನಡ ಸಾಹಿತ್ಯ–ಸಂಸ್ಕೃತಿಯ ಪುನರವಲೋಕನಕ್ಕೆ ಕಾರಣರಾದ ರಾಜಕಾರಣಿ ಬಿ. ಬಸವಲಿಂಗಪ್ಪ

ಹೇಳುವ ಹಾಗೆ, ‘ಆಲ್ ಲಿಟರೇಚರ್ ಈಸ್ ವಲ್ಗರ್’ (‘ವಲ್ಗರ್’ ಎಂದರೆ ಇಲ್ಲಿ ‘ಅಶ್ಲೀಲ’ ಎಂದಲ್ಲ. ಅದರ ಲ್ಯಾಟಿನ್ ಮೂಲದ ಅರ್ಥ ‘ಜನರಿಗೆ ಸೇರಿದ್ದು’ ಎಂದು.) ದಲಿತ ಸಾಹಿತ್ಯದ ಹಿಂದಿನ ಯಾವ ಸಾಹಿತ್ಯ ಚಳವಳಿಗೂ ಅದು ಸಾಧ್ಯವಾಗಿರಲಿಲ್ಲ. ಅದಕ್ಕೆ ಪ್ರಗತಿಶೀಲ ಸಾಹಿತ್ಯವೂ ಹೊರತಾಗಿರಲಿಲ್ಲ. ಹಾಗಾಗಿ, “ಭಾರತದ ಪ್ರಜೆಗಳಾದ ನಾವು...” ಎಂಬ ಜನಾಳ್ವಿಕೆಯ ನುಡಿಯನ್ನು ದಿಟವಾಗಿಸಿದ ಕೀರ್ತಿ ದಲಿತ ಸಾಹಿತ್ಯಕ್ಕೆ ಸಲ್ಲುತ್ತದೆ. ಆದರೆ, ದಲಿತ ಸಾಹಿತ್ಯ ‘ದಲಿತ ಸಂಘರ್ಷ ಸಮಿತಿ’ಯ ಸ್ಥಾಪನಾ ಸಂಚಾಲಕರಾಗಿದ್ದ ಬಿ. ಕೃಷ್ಣಪ್ಪನವರು ತಮ್ಮ ‘ದಲಿತ ಸಾಹಿತ್ಯ’ ಲೇಖನದಲ್ಲಿ ಮೀಮಾಂಸೆ ಮಂಡಿಸಿದಂತೆ, ಕ್ರಾಂತಿಯನ್ನು ತನ್ನ ಉದ್ದೇಶವಾಗಿರಿಸಿಕೊಂಡು, ಜನಸಾಮಾನ್ಯರನ್ನು ಕೇಂದ್ರವಾಗಿರಿಸಿಕೊಂಡು ಅನ್ಯಾಯದ ವಿರುದ್ಧ ಅವರನ್ನು ಪ್ರಚೋದಿಸುವ, ಕ್ರಾಂತಿಗೆ ತಯಾರು ಮಾಡುವ ಸಾಹಿತ್ಯವಾಗಿರಬೇಕು ಎಂಬುವುದನ್ನು ನಿಜವಾಗಿಸಿತೇ ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಅಂತಹ ಅಧ್ಯಯನಗಳು ಕನ್ನಡದಲ್ಲಿನ್ನೂ ಬಂದಿಲ್ಲವೆಂದೇ ಹೇಳಬೇಕು. ಆದರೆ, ಇಂತಹದ್ದೇ ಅನೇಕ ಪ್ರಶ್ನೆಗಳನ್ನು, ದಲಿತ ಸಾಹಿತ್ಯದೊಳಗಿನ ವಿರೋಧಾಭಾಸವನ್ನು ಬಿ. ಪುಟ್ಟಯ್ಯನವರು ತಮ್ಮ ‘ದಲಿತ ಸಾಹಿತ್ಯ ಚಳವಳಿ ಸೃಜನಶೀಲ ಪ್ರಕಾರಗಳ ಅವಲೋಕನ’ದಲ್ಲಿ ಎತ್ತಿದ್ದಾರೆ ಎಂದಷ್ಟೇ ಹೇಳಬಹುದು.

ಬಸವಲಿಂಗಪ್ಪನವರನ್ನು ದೊಡ್ಡದಾಗಿ ಬೆಂಬಲಿಸಿದ್ದ ಕುವೆಂಪು ಅವರ ಕಾದಂಬರಿಗಳಲ್ಲಿನ ದಲಿತ ಪಾತ್ರಗಳ ಚಿತ್ರಣವನ್ನು ಬಿ. ಕೃಷ್ಣಪ್ಪನವರು ಮೇಲೆ ಹೆಸರಿಸಿದ ಲೇಖನದಲ್ಲಿ ಪ್ರಶ್ನಿಸಿದ್ದುಂಟು. ಹಾಗೆಯೇ, 1978ರಲ್ಲಿ ‘ಪ್ರಜಾವಾಣಿ’ಗೆ ನೀಡಿದ್ದ ಸಂದರ್ಶನದಲ್ಲಿ ಶಿವರಾಮ ಕಾರಂತರು “ಸಾಹಿತ್ಯವನ್ನು ಜಾತಿಯ ಕಣ್ಣಿನಲ್ಲಿ ನೋಡಲು ಸಾಧ್ಯವಿಲ್ಲ” ಎಂಬುದನ್ನು ಕೂಡ. ಇಲ್ಲಿಯೇ ದಲಿತ ಸಾಹಿತ್ಯ ಸಾಮಾಜಿಕ ವಾಸ್ತವವಾದ ಹಾಗೂ ಸಮಾಜವಾದಿ ವಾಸ್ತವವಾದವನ್ನು ವಿಮರ್ಶೆಗೊಳಪಡಿಸಿದ್ದು. ಇದು ವಿಮರ್ಶಾಕಾರಣಗಳಿಗೆ